ಕಥೆ

# ಪಥಾಚರಳೂ... ತಥಾಗತನೂ...



**ಕಂನಾಡಿಗಾ ನಾರಾಯಣ**

ಕಲೆ: ರಾಮಕೃಷ್ಣ ಸಿದ್ರಪಾಲ

ಶ್ರಾವಸ್ತಿ ನಗರದ ಮುಖ್ಯಬೀದಿಯಲ್ಲಿಯೇ ನಮ್ಮ ಮನೆ ಇದ್ದದ್ದು. ಅಥವಾ ಊರು ನಿರ್ಮಾಣವಾದುದೇ ನಮ್ಮ ಮನೆಯ ಸುತ್ತಮುತ್ತ ಎಂದು ಹೇಳಬಹುದೇನೋ. ಅಷ್ಟು ಪುರಾತನ ಕಾಲದಿಂದಲೂ ನಮ್ಮ ಕುಟುಂಬ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಂಡಿತ್ತು. ಮುಖ್ಯಬೀದಿಗೆ ಮುಖ ಮಾಡಿಕೊಂಡಿದ್ದ ಅಂಗಡಿ, ಅದರ ಪಕ್ಕದ ಸಣ್ಣ ಓಣಿಯೊಳಗಿಂದ ಹಿಂದೆ ಬಂದರೆ ವಿಶಾಲವಾದ ಮನೆ. ಮನೆಯ ಗಂಡಸರೆಲ್ಲರೂ ಬೆಳಗಿನ ತಿಂಡಿ, ಸ್ನಾನ, ಶೌಚಾದಿಗಳನ್ನು ಸರದಿಯ ಮೇಲೆ ಮುಗಿಸುತ್ತಾ ಸದಾ ಅಂಗಡಿ ವ್ಯವಹಾರದಲ್ಲಿ ನಿರತರಾಗಿರುತ್ತಿದ್ದರು. ಬೇರೆಬೇರೆ ಕಡೆಗಳಿಂದ ವ್ಯವಹಾರಕ್ಕೆ ಬೇಕಾದ ವಸ್ತುಗಳನ್ನು ಕೊಂಡು ತರುವುದು, ಇಲ್ಲಿಂದ ಮಾರುವುದು– ಹೀಗೆ ಸದಾ ಚಲನಶೀಲವಾದ ವ್ಯಾವಹಾರಿಕ ಕುಟುಂಬ ನಮ್ಮದು. ಹಾಗಂತ ಹೆಂಗಸರುಗಳೇನೂ ಸುಮ್ಮನಿರುತ್ತಿರಲಿಲ್ಲ. ಅವರಿಗೆ ಬೇಕಾದ ತಿಂಡಿ, ತೀರ್ಥ ಇತ್ಯಾದಿ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸುತ್ತಾ, ಆಗಾಗ್ಗೆ ಅಂಗಡಿಗೆ ಹೋಗಿ ಸಂಗ್ರಹಿತವಾದ ಹೊನ್ನು, ಹಣವನ್ನು ಸೀರೆಯ ಸೆರಗಿನ ಮರೆಯಲ್ಲಿ ಮನೆಯೊಳಕ್ಕೆ ತರುವುದು, ಅದನ್ನು ಎಣಿಸಿ ಜೋಡಿಸಿ ಇಡುವುದು, ಮತ್ತೆ ವ್ಯವಹಾರಕ್ಕೆ ಕೇಳಿದಾಗ ಕೊಡುವುದು.. ಹೀಗೆ ನಿರಂತರವಾದ ಚಟುವಟಿಕೆಗಳಿಂದ ಕೂಡಿದ್ದ ಸಂಸಾರ ನಮ್ಮದಾಗಿತ್ತು.

ಈ ಗಡಿಬಿಡಿಯಲ್ಲೇ, ಮಗುವಾಗಿದ್ದ ನನಗೆ ಪ್ರೌಢಾವಸ್ಥೆ ಬಂದುದೇ ಮನೆಯ ಯಾರ ಅರಿವಿಗೂ ಬರಲೇಯಿಲ್ಲ. ಮನೆಯಲ್ಲೆಲ್ಲಾ ಅತ್ಯಂತ ಸಣ್ಣವಳಾದುದರಿಂದ ಮತ್ತು ನನಗಿಂತ ಚಿಕ್ಕಮಕ್ಕಳು ಇಲ್ಲದುದರಿಂದ ನನ್ನನ್ನು ಮಗುವಿನಂತೆಯೇ ಪ್ರೀತಿಸುತ್ತಿದ್ದರು. ಆದರೆ ನನಗೆ ಮಾತ್ರ ನನ್ನ ಆಗುಹೋಗುಗಳನ್ನೆಲ್ಲಾ ನೋಡಿಕೊಳ್ಳುತ್ತಿದ್ದ ಮನೆಯ ಆಳುಮಗನ ಮೇಲೆ ವ್ಯಾಮೋಹ. ಹತ್ತು ವರ್ಷದವಳಿದ್ದಾಗಿನಿಂದಲೂ ಅವನೊಂದಿಗೆ ಬೆಳೆದ ಸಾಂಗತ್ಯ ಹದಿಮೂರು– ಹದಿನಾಲ್ಕಾಗುವಷ್ಟರಲ್ಲಿ ಹೆಚ್ಚು ಆಳವಾಗಿಬಿಟ್ಟಿತ್ತು. ಅವನನ್ನು ಬಿಟ್ಟಿರಲು ಸಾಧ್ಯವೇ ಆಗದಂತಹ ಭಾವ.

ಇದು ಹೇಗೋ ಮನೆಯ ಹೆಂಗಸರ ಅರಿವಿಗೆ ಬಂದು, ಗಂಡಸರಿಗೆ ಹೇಳಿ ನನ್ನ ವಿವಾಹಕ್ಕೆ ಸಿದ್ಧತೆಗಳು ಆರಂಭವಾದವು. ಯಾವಾಗ ಮನೆಯಲ್ಲಿ ಮದುವೆಯ ಚಟುವಟಿಕೆಗಳು ನಡೆಯಲಾರಂಭಿಸಿದವೋ ಆಗ ಅವನನ್ನು ಬಿಟ್ಟಿರಲಾರದ ಭಾವನೆ ತೀವ್ರವಾಗಿ ಕಾಡಲಾರಂಭಿಸಿತು. ಒಳ್ಳೆಯ ವ್ಯಾಪಾರೀ ಹುಡುಗನನ್ನೇ ಮನೆಯವರು ಆರಿಸಿ ತಂದರೂ ಅವನಲ್ಲೇನೂ